**TERM – I – PERIODIC TEST – I – 2024-25**
**KANNADA (II LANGUAGE)**
**SUBJECT CODE - 015**

**Class: X** | **Max Marks: 30**
**No of pages:06** | **Time: 1 Hour**

---

**ಸೂಚನೆಗಳು:-**

- ➢ ಈ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು ೯ ಮುಖ್ಯಪ್ರಶ್ನೆಗಳು ಇರುತ್ತವೆ.
- ➢ ಈ ಪ್ರಶ್ನೆಪತ್ರಿಕೆಯು 'ಎ' ಮತ್ತು 'ಬಿ' ಎಂಬ ಎರಡು ಭಾಗಗಳನ್ನು ಮತ್ತು ಎ, ಬಿ, ಸಿ, ಡಿ ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತದೆ.
- ➢ ಭಾಗ - 'ಎ'ನ ವಿಭಾಗ - 'ಎ'ನಲ್ಲಿ ಒಟ್ಟು ೨ ಮುಖ್ಯಪ್ರಶ್ನೆಗಳು, ೩ ಬಹು ಆಯ್ಕೆಯ ಉಪ-ಪ್ರಶ್ನೆಗಳು ಮತ್ತು ಬರವಣಿಗೆಯ ೩ ಪ್ರಶ್ನೆಗಳಿರುತ್ತವೆ.
- ➢ ಭಾಗ - 'ಎ'ನ ವಿಭಾಗ - 'ಬಿ'ನಲ್ಲಿ ೩ ಬಹು ಆಯ್ಕೆಯ ಪ್ರಶ್ನೆಗಳು, ೩ ಬರವಣಿಗೆಯ ಪ್ರಶ್ನೆಗಳು ಮತ್ತು ೨ ಪಠ್ಯಪೂರಕದ ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ.
- ➢ ಭಾಗ - 'ಬಿ'ನ ವಿಭಾಗ - 'ಸಿ'ನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು.
- ➢ ಭಾಗ - 'ಬಿ'ನ ವಿಭಾಗ - 'ಡಿ'ಯಲ್ಲಿಯ ಎಲ್ಲಾ ಮುಖ್ಯಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.
- ➢ ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿರಿ.
- ➢ ಮುಖ್ಯಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

| **ಭಾಗ - ಎ (ಬಹು ಆಯ್ಕೆಯ ಪ್ರಶ್ನೆಗಳು ಮತ್ತು ಬರವಣಿಗೆ) 14 ಅಂಕಗಳು** | | | |
|---|---|---|---|
| ಭಾಗ - ಎ | ವಿಭಾಗ - ಎ | ವಾಚನ ಮತ್ತು ಗ್ರಹಿಕಾ ಕೌಶಲ್ಯ | 5 |
| | ವಿಭಾಗ - ಬಿ | ಅನ್ವಯಿಕ ವ್ಯಾಕರಣ | 7 |
| | | ಬಹು ಆಯ್ಕೆ ಪ್ರಶ್ನೆಗಳು - ಪಠ್ಯಗಳ ಅಧ್ಯಯನ | 2 |
| **ಭಾಗ-ಬಿ (ಬರವಣಿಗೆ ಕೌಶಲ್ಯ ಮತ್ತು ಪಠ್ಯಗಳ ಅಧ್ಯಯನ) 16 ಅಂಕಗಳು** | | | |

| | | | |
|---|---|---|---|
| ಭಾಗ - ಬಿ | ವಿಭಾಗ - ಸಿ | ಬರವಣಿಗೆ ಕೌಶಲ್ಯ | 4 |
| | ವಿಭಾಗ - ಡಿ | ಪಠ್ಯಗಳ ಅಧ್ಯಯನ | 12 |
| | | **ಒಟ್ಟು ಅಂಕಗಳು** | **30** |

## ಭಾಗ -ಎ (ಬಹು ಆಯ್ಕೆಯ ಪ್ರಶ್ನೆಗಳು ಮತ್ತು ಬರವಣಿಗೆ)

## ವಿಭಾಗ - ಎ (ವಾಚನ ಮತ್ತು ಗ್ರಹಿಕಾ ಕೌಶಲ್ಯ)

**I. ಈ ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ. (5X1=5)**

ಕನ್ನಡ ನಾಡಿನ ಇತಿಹಾಸದ ಪುಟವು ಶೌರ್ಯ, ತ್ಯಾಗ, ಬಲಿದಾನ, ನಾಡಿನ ರಕ್ಷಣೆಗೆ ಹೆಸರಾಗಿದೆ. ಇಲ್ಲಿನ ಪ್ರತಿ ಪುಟದಲ್ಲಿಯೂ ಹಲವು ಹೆಸರುಗಳು ತಿಳಿದುಬರುವುದು. ಕನ್ನಡ ನೆಲದ ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ, ಕಿತ್ತೂರು ಚೆನ್ನಮ್ಮ, ಕಳುಮೆಣಸಿನ ರಾಣಿ ಭೈರಾದೇವಿ ಇಂತಹ ರಾಣಿಯರ ಜೊತೆಯಲ್ಲಿ ಒನಕೆ ಓಬವ್ವನ ಹೆಸರು ಕನ್ನಡ ನಾಡಿನ ಚರಿತ್ರೆಯಲ್ಲಿ ಅಜರಾಮರವಾಗಿದೆ. ಈ ನಾಡಿನಲ್ಲಿ 'ಕಲ್ಲಿನ ಕೋಟೆ' ಎಂದು ಪ್ರಸಿದ್ಧವಾದುದು ಚಿತ್ರದುರ್ಗ. ಇದರ ಇನ್ನೊಂದು ಖ್ಯಾತಿ ಎಂದರೆ 'ಒನಕೆ ಓಬವ್ವ' ಹೈದರಾಲಿಯ ಸೈನ್ಯದ ವಿರುದ್ಧ ಏಕಾಂಗಿಯಾಗಿ ಹೋರಾಡಿದ ಧೀರ ಮಹಿಳೆ. ಹೈದರನ ಅಸಂಖ್ಯಾತ ಸೈನಿಕರನ್ನು ಕೊಂದು ಕೋಟೆಯನ್ನು ಕಾಪಾಡಿದಳು. ಚಿತ್ರದುರ್ಗದ ಕೋಟೆಯು ಬಂಡೆಯ ಏಳು ಸುತ್ತಿನ ಕಲ್ಲಿನಕೋಟೆ. ೧೯ ಮುಖ್ಯದ್ವಾರಗಳು ಮತ್ತು ೩೫ಕ್ಕೂ ಹೆಚ್ಚು ರಹಸ್ಯ ದಾರಿಗಳು ಹಾಗೂ ಸುಮಾರು ೨೦೦೦ ಕಾವಲು ಗೋಪುರಗಳಿದ್ದವು. ಕೋಟೆಯ ಒಳಗೆ ಜಲಾಶಯ, ನೀರಿನ ಹೊಂಡಗಳು, ಗೋದಾಮುಗಳು ಹೀಗೆ ಎಲ್ಲಾ ರೀತಿಯ ವ್ಯವಸ್ಥೆಗಳು ಇತ್ತು. ಹದಿನೆಂಟಕ್ಕೂ ಹೆಚ್ಚು ದೇವಾಲಯಗಳನ್ನು ಈಗಲೂ ಕಾಣಬಹುದು. ಮದಕರಿ ನಾಯಕನ ಆಳ್ವಿಕೆಯ ಅವಧಿಯಲ್ಲಿ ಹೈದರಾಲಿಯು ಮುತ್ತಿಗೆ ಹಾಕಿದನು. ಆ ಏಳು ಸುತ್ತಿನ ಉಕ್ಕಿನ ಕೋಟೆಯನ್ನು ಗೆಲ್ಲುವುದು ಸುಲಭವಾಗಿರಲಿಲ್ಲ. ಅದರ ಪ್ರವೇಶದ ರೀತಿಯನ್ನು ತಿಳಿಯದೆ ಕಂಗಾಲಾಗಿತ್ತು ಹೈದರನ ಸೇನೆ. ಹಲವು ತಿಂಗಳ ಮುತ್ತಿಗೆ ನಂತರ ಹೈದರನ ಗುಪ್ತಚರರು ಒಂದು ರಹಸ್ಯ ಮಾರ್ಗವನ್ನು ಕಂಡುಹಿಡಿದರು. ಅದು ಅತ್ಯಂತ ಕಿರಿದಾದ ಜಾಗ. ಮೋಣಕಾಲಿನ ಮೇಲೆ, ತೆವಳಿಕೊಂಡು ಬರಬಹುದಾಗಿತ್ತು. ಕಾವಲುಗಾರನು ಊಟಕ್ಕೆ ಹೋದ ಸಮಯದಲ್ಲಿ ಒಳಗೆ ಪ್ರವೇಶಿಸಲು ಯತ್ನಿಸಿದರು. ತನ್ನ ಪತಿಗೆ ಊಟವನ್ನು ತರುವ ಓಬವ್ವ ಊಟವನ್ನು ನೀಡಿ, ಕುಡಿಯುವ ನೀರನ್ನು ತರಲು ಹೋಗುವಳು. ಆಗ ಕಿಂಡಿಯ ಬಳಿ ಸೈನಿಕರ ಪಿಸುಮಾತು ಕೇಳಿ, ಕೋಟೆ ಹೊರಗೆ ಸೈನಿಕರು ಇರುವುದು, ಅವರು ಕಿಂಡಿಯ ಮೂಲಕ ಬರುವ ಪ್ರಯತ್ನದಲ್ಲಿರುವುದನ್ನು ಅರಿತ ಆಕೆ ಗಂಡನಿಗೆ ತಿಳಿಸಲು ಓಡಿ ಬರುವಳು. ಆದರೆ ಅವನ ಊಟವು ಇನ್ನೂ ಮುಗಿದಿರಲಿಲ್ಲ. ಈ ಕಾರಣ ಒನಕೆಯನ್ನ ಹಿಡಿದು ಕಿಂಡಿಯ ಬಳಿ ಕಾಯುವಳು. ನುಸುಳಿ ಬರುವ ಸೈನಿಕನ ತಲೆಗೆ ಹೊಡೆದು, ಎಳೆದು ಹಾಕಿ ಒಳ ಬರುವ ಬೇರೊಬ್ಬ ಸೈನಿಕನಿಗಾಗಿ ಕಾಯ್ದು ಹೊಡೆಯುವಳು. ಹೀಗೆ ಸೈನಿಕರ ಹೆಣದ ರಾಶಿಯೇ ಆಗುವುದು. ಅಷ್ಟರಲ್ಲಿ ಹೆಂಡತಿಯನ್ನು ಹುಡುಕಿಕೊಂಡು ಬರುವ ಕಾವಲುಗಾರ ಆಕೆಯನ್ನು ಕಂಡು ಬೆಚ್ಚಿ, ಆಶ್ಚರ್ಯಚಕಿತನಾಗಿ, ತನ್ನ ಕಹಳೆಯನ್ನು ಊದಿ ಸೈನಿಕರನ್ನು ಎಚ್ಚರಿಸಿದನು. ಈ ರಣಚಂಡಿ ಓಬವ್ವನಿಂದ ಅಂದು ಕೋಟೆಯು ಹೈದರಾಲಿಯ ವಶವಾಗುವುದು ತಪ್ಪಿತು. ಈಕೆಯ ಹೆಸರು ಶಾಶ್ವತವಾಗಿ ಇತಿಹಾಸದ ಪುಟದಲ್ಲಿ ದಾಖಲಾಯಿತು.

**ಪ್ರಶ್ನೆಗಳು:**

1. ಕನ್ನಡ ನಾಡಿನ ಇತಿಹಾಸದ ಪುಟವು ಶೌರ್ಯ, ತ್ಯಾಗ, ಬಲಿದಾನ, ನಾಡಿನ ರಕ್ಷಣೆಗೆ ಹೆಸರಾದ ರಾಣಿಯರು _____________

   ಎ. ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ, ಕಾಳುಮೆಣಸಿನ ರಾಣಿ ಭೈರಾದೇವಿ

   ಬಿ. ಒನಕೆ ಓಬವ್ವ, ಝಾನ್ಸಿರಾಣಿ ಲಕ್ಷ್ಮಿ ಬಾಯಿ, ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ

   ಸಿ. ರಾಣಿ ಮಲ್ಲಮ್ಮ, ಶಿವಗಾಮಿ ದೇವಿ, ಕೆಳದಿ ಚೆನ್ನಮ್ಮ, ಕಿತ್ತೂರು ಚೆನ್ನಮ್ಮ, ಒನಕೆ ಓಬವ್ವ

   ಡಿ. ರಾಣಿ ಅಬ್ಬಕ್ಕ, ಅಹಲ್ಯ ಬಾಯಿ ಹೋಳ್ಕರ್, ಕೆಳದಿ ಚೆನ್ನಮ್ಮ, ಕಿತ್ತೂರು ಚೆನ್ನಮ್ಮ, ಒನಕೆ ಓಬವ್ವ

2. ಚಿತ್ರದುರ್ಗದ ಕೋಟೆಯಲ್ಲಿ ಇದ್ದ ದೇವಾಲಯಗಳು _____________

   ಎ. ೧೮  ಬಿ. ೧೯  ಸಿ. ೨೦೦೦  ಡಿ. ೩೫

3. ಹೈದರಾಲಿಯು ಕಂಗಾಲಾಗಿದ್ದನು. ಇದಕ್ಕೆ ಕಾರಣ----------------

   ಎ. ಕೋಟೆಯು ದೊಡ್ಡದಾಗಿತ್ತು.

   ಬಿ. ಕೋಟೆಯ ಪ್ರವೇಶದ ರೀತಿಯು ತಿಳಿಯದಾಗಿತ್ತು.

   ಸಿ. ಕೋಟೆಯನ್ನು ಕಾವಲು ಕಾಯುತ್ತಿದ್ದರು.

   ಡಿ. ಕೋಟೆಯಲ್ಲಿ ಓಬವ್ವ ವಾಸವಾಗಿದ್ದಳು.

4. ಕಿಂಡಿಯ ಬಳಿ ಸೈನಿಕರ ಪಿಸುಮಾತು ಕೇಳಿ, ಕೋಟೆ ಹೊರಗೆ ಸೈನಿಕರು ಇರುವುದು, ಅವರು ಕಿಂಡಿಯ ಮೂಲಕ ಬರುವ ಪ್ರಯತ್ನದಲ್ಲಿರುವುದನ್ನು ಕಂಡು ಓಬವ್ವ

ಹೇಳಿಕೆಗಳು:

೧. ಗಂಡನಿಗೆ ತಿಳಿಸಲು ಓಡಿ ಬರುವಳು.

೨. ಒನಕೆಯನ್ನು ಹಿಡಿದು ಕಿಂಡಿಯ ಬಳಿ ಕಾಯುವಳು.

೩. ನುಸುಳಿ ಬರುವ ಸೈನಿಕರ ತಲೆಗೆ ಹೊಡೆದು, ಎಳೆದು ಹಾಕಿ ಒಳ ಬರುವ ಬೇರೊಬ್ಬ ಸೈನಿಕನಿಗಾಗಿ ಕಾಯ್ದು ಹೊಡೆಯುವಳು.

   ಎ. ೧ ಮತ್ತು ೩ನೇ ಹೇಳಿಕೆ ಸರಿ

   ಬಿ. ೨ ಮತ್ತು ೩ನೇ ಹೇಳಿಕೆ ಸರಿ

   ಸಿ. ಮೇಲಿನ ಮೂರೂ ಹೇಳಿಕೆಗಳು ತಪ್ಪು

   ಡಿ. ಮೇಲಿನ ಮೂರೂ ಹೇಳಿಕೆಗಳು ಸರಿ

5. ತನ್ನ ಕಹಳೆಯನ್ನು ಊದಿ ಸೈನಿಕರನ್ನು ಎಚ್ಚರಿಸಿದವರು-----------------

ಎ. ರಣಚಂಡಿ ಓಬವ್ವ

ಬಿ. ಹೈದರಾಲಿಯ ಗುಪ್ತಚರರು

ಸಿ. ಕೋಟೆಯ ಕಾವಲುಗಾರ

ಡಿ. ಮದಕರಿ ನಾಯಕ

**ವಿಭಾಗ - ಬಿ (ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ)**

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ನೀಡಲಾಗಿದೆ. ಇವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

**(5X1=5)**

**1. ಈ ಕೆಳಗಿನ ಸರಿಯಾಗಿ ಹೊಂದಿಸಿದ ಸಂಧಿ-ಪದಗಳನ್ನು ಗುರುತಿಸಿ ಬರೆಯಿರಿ.**

| | |
|---|---|
| ಅ) ಲೋಪಸಂಧಿ | ೧. ಮಹರ್ಷಿ |
| ಆ) ಗುಣಸಂಧಿ | ೨. ಕನ್ನಡಿಗ |
| ಇ) ಸವರ್ಣದೀರ್ಘಸಂಧಿ | ೩. ಎಳೆಗರು |
| ಈ) ಆದೇಶಸಂಧಿ | ೪. ಬಕಾಸುರ |

ಎ. ಅ-೧ ಆ-೨ ಇ-೩ ಈ-೪ ಬಿ. ಅ-೪ ಆ-೩ ಇ-೨ ಈ-೧

ಸಿ. ಅ-೨ ಆ-೧ ಇ-೪ ಈ-೩ ಡಿ. ಅ-೪ ಆ-೧ ಇ-೩ ಈ-೨

2. 'ರಾಜ್ಯವನ್ನು' ಎಂಬ ಪದವು ದ್ವಿತೀಯಾ ವಿಭಕ್ತಿಯಾದರೆ, 'ರಾಜನ ದೆಸೆಯಿಂದ' ಎಂಬ ಪದವು ಈ ವಿಭಕ್ತಿಯಾಗಿದೆ.

ಎ. ಸಪ್ತಮೀ

ಬಿ. ಪಂಚಮೀ

ಸಿ. ತೃತೀಯಾ

ಡಿ. ದ್ವಿತೀಯಾ

3. ಕೆಳಗೆ ಕೊಟ್ಟಿರುವ ತತ್ಸಮ - ತದ್ಭವಗಳ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ.

ಅ) ಚೀರ – ಸೀರೆ ಆ) ದಿಟ್ಟಿ – ದೃಷ್ಟಿ ಇ) ತವಸಿ – ಮಹಿಳೆ ಈ) ಶ್ರೀ – ಶ್ರೀಮಂತ

ಎ. ಅ ಮತ್ತು ಆ

ಬಿ. ಅ ಮತ್ತು ಇ

ಸಿ. ಇ ಮತ್ತು ಈ

ಡಿ. ಆ ಮತ್ತು ಇ

4. 'ಅಬ್ಬೆ' ಪದದ ಸಮಾನಾರ್ಥಕ ಪದ ______________

ಎ. ಅಜ್ಜಿ

ಬಿ. ತಾಯಿ

ಸಿ. ಇಳೆ

ಡಿ. ಮನೆ

5. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದವನ್ನು ಗುರುತಿಸಿ ಬರೆಯಿರಿ.

ಸತಿಪತಿ, ಮಕ್ಕಳುಮರಿ : ಜೋಡುನುಡಿ : : ಸರಸರ, ಜುಳುಜುಳು : _______________

ಎ. ಅನುಕರಣಾವ್ಯಯ

ಬಿ. ಸರ್ವನಾಮ

ಸಿ. ದ್ವಿರುಕ್ತಿ

ಡಿ. ಜೋಡುನುಡಿ

**III. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.**

**(2X1=2)**

1. 'ನಾನು ಬೆಂಗಳೂರಿಗೆ ಹೋಗುತ್ತೇನೆ.' - ಈ ವಾಕ್ಯವನ್ನು ಭೂತಕಾಲಕ್ಕೆ ಬದಲಾಯಿಸಿ ಬರೆಯಿರಿ.

2. 'ಮನಸ್ಸಿದ್ದರೆ ಮಾರ್ಗ' ಅಥವಾ 'ತಾಳಿದವನು ಬಾಳಿಯಾನು'- ಇವುಗಳಲ್ಲಿ ಯಾವುದಾದರೂ ಒಂದು ಗಾದೆಮಾತಿನ ಅರ್ಥವನ್ನು ಬರೆಯಿರಿ.

**IV. ಕೆಳಗಿನ ಪ್ರಶ್ನೆಗಳಿಗೆ ಅಥವಾ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ. (2X1=2)**

1. ಬರವಣಿಗೆಯನ್ನು ತಿದ್ದಿಕೊಳ್ಳುವುದರ ಬಗ್ಗೆ ಕುರಿತು ಸುಟ್ಟಮಡಿಕೆಗೆ ಹಸಿಮಣ್ಣನ್ನು ಮೆತ್ತಲು ಸಾಧ್ಯವೇ? '' ಎಂದು ಹೇಳಿದವರು

   ಎ. ಸ್ವಾಮಿ ವಿವೇಕಾನಂದ

   ಬಿ. ರಸ್ಕಿನ್

   ಸಿ. ಗಾಂಧೀಜಿ

   ಡಿ. ಅಂಬೇಡ್ಕರ್

2. ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು----------------ಸ್ವಾತಂತ್ರ್ಯವಾಗಿದೆ.

   ಎ. ಕ್ರಿಯಾ

   ಬಿ. ರಾಜಕೀಯ

   ಸಿ. ಆರ್ಥಿಕ

   ಡಿ. ಸಾಮಾಜಿಕ

**ಭಾಗ-ಬಿ (ಬರವಣಿಗೆ ಕೌಶಲ್ಯ ಮತ್ತು ಪದ್ಯಗಳ ಅಧ್ಯಯನ)**

**ವಿಭಾಗ - ಸಿ (ಬರವಣಿಗೆ ಕೌಶಲ್ಯ)**

**V. ನಿಮ್ಮ ಬಡಾವಣೆಗೆ ತಲುಪಬೇಕಾದ ಕಾಗದಗಳು ಸರಿಯಾಗಿ ಬಟವಾಡೆ ಆಗುತ್ತಿಲ್ಲ ಎಂದು ತಿಳಿಸುತ್ತಾ, ನಿಮ್ಮ ಬಡಾವಣೆಯ ವ್ಯಾಪ್ತಿಯಲ್ಲಿ ಬರುವ ಅಂಚೆ ಕಛೇರಿಯ ವಿಭಾಗದ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ. (1X4=4)**

**(ಅಥವಾ)**

ನಿಮ್ಮ ಶಾಲೆಯಲ್ಲಿ ನಡೆದ ಯೋಗ ದಿನಾಚರಣೆಯನ್ನು ಕುರಿತು ಒಂದು ವರದಿಯನ್ನು ತಯಾರಿಸಿ.

**ವಿಭಾಗ - ಡಿ (ಪಠ್ಯಗಳ ಅಧ್ಯಯನ)**

**VI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(1X2=2)**

1. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

**(ಅಥವಾ)**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

**VII. ಈ ಕೆಳಗಿನ ಪ್ರಶ್ನೆಗೆ ಐದಾರೂ ವಾಕ್ಯಗಳಲ್ಲಿ ಉತ್ತರಿಸಿ.** **(1X3=3)**

1. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?

**VIII. ಈ ಕೆಳಗಿನ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ.** **(1X3=3)**

1. "ಆವುದೀ ಮರುಳು? ನಮ್ಮೆಡೆಗೆ ಬರುತ್ತಿಹುದು."

**(ಅಥವಾ)**

"ಹೊಸ ಎಚ್ಚರದೊಳು ಬದುಕೋಣ"

**IX. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **(1X4=4)**

1. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ? ತಿಳಿಸಿ.

**(ಅಥವಾ)**

ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?

**************************************************